# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೆಚ್.ಎ.ಎಲ್ ಏರ್‌ಪೋರ್ಟ್ ಉಪವಿಭಾಗ ಮಹದೇವಪುರ ವಲಯ, ಬೆಂಗಳೂರು

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೆಚ್.ಎ.ಎಲ್/ಪಿಆರ್/08/2020-21 ದಿನಾಂಕ: 23-12-2021

### ವಾರ್ಡ್ ಸಮಿತಿ ಸಭೆಯ ನಡಾವಳಿಗಳು.

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾನ್ಯ ಆಯುಕ್ತರು ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ:22/09/2021, ಆದೇಶದಂತೆ ದಿನಾಂಕ:23/12/2021 ರಂದು ನೋಡಲ್ ಅಧಿಕಾರಿ ಶ್ರೀ.ಪಿ.ವನರಾಜು, ಸಹಾಯಕ ಕಾರ್ಯಪಾಲಕ ಅಭಿಯಂತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,ಇವರ ಅಧ್ಯಕ್ಷತೆಯಲ್ಲಿ ಹೆಚ್.ಎ.ಎಲ್ ಏರ್‌ಪೋರ್ಟ್ ಉಪವಿಭಾಗದ ವಾರ್ಡ್-56 ಎ.ನಾರಾಯಣಪುರ ವಾರ್ಡ್ ಕಛೇರಿಯಲ್ಲಿ ವಾರ್ಡ್ ಸಮಿತಿ ನಡೆಸಿದ ಸಭೆಯ ನಡಾವಳಿಗಳು ಈ ಕೆಳಕಂಡಂತೆ ಇರುತ್ತದೆ.

ಉಪಸ್ಥಿತರು:

| ಕ್ರ.ಸಂ | ಹೆಸರು | ಹುದ್ದೆ |
|---|---|---|
| | ಅಧಿಕಾರಿಗಳು | |
| 1 | ಶ್ರೀ.ಪಿ.ವನರಾಜು | ವಾರ್ಡ್ ಸಮಿತಿ ಸಭೆಯ ನೋಡಲ್ ಅಧಿಕಾರಿ ವಾ.ನಂ.56, ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿಬಿಎಂಪಿ |
| 2 | ಶ್ರೀ.ಜಿ.ಡಿ.ಸೋಮಯ್ಯ | ವಾರ್ಡ್ ಸಮಿತಿಯ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ.56 ಎ.ನಾರಾಯಣಪುರ |
| 3 | ಶ್ರೀ.ಸುವರ್ಣ ಹೆಚ್.ಸಿ | ಕಿರಿಯ ಆರೋಗ್ಯ ನಿರೀಕ್ಷಕರು |
| 4 | ಶ್ರೀಮತಿ.ಅಂಜಲಿ.ಎಸ್ | ಆರೋಗ್ಯ ಅಧಿಕಾರಿ ವಾರ್ಡ್ ನಂ 56 ಪ್ರಾಥಮಿಕ ಆರೋಗ್ಯ ಕೇಂದ್ರ ಎ.ನಾರಾಯಣಪುರ |
| 5 | ಶ್ರೀ. ಅಮಿತ್.ಬಿ.ಸಿ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ 56 |
| 6 | ಶ್ರೀ. ಹೆಚ್.ಆರ್. ರವಿ | ಮೌಲ್ಯಮಾಪಕರು,ಬಿಬಿಎಂಪಿ ಕಂದಾಯ ನಿರೀಕ್ಷಕರು ವಾರ್ಡ್ ನಂ.56 |
| 7 | ಶ್ರೀಮತಿ. ಹಿನ ಕೌಸರ್ | ಕಿರಿಯ ಸಹಾಯಕ ಅಭಿಯಂತರರು ಬೆಸ್ಕಾಂ ವಾರ್ಡ್ ನಂ.56 ಎ.ನಾರಾಯಣಪುರ |
| 8 | ಶ್ರೀ.ಅಭಿಷೇಕ್.ಪಿ | ಕಿರಿಯ ಸಹಾಯಕ ಅಭಿಯಂತರರು ಬೆಸ್ಕಾಂ ವಾರ್ಡ್ ನಂ.56 ಎ.ನಾರಾಯಣಪುರ |
| 9 | ಶ್ರೀ.ರಾಘವೇಂದ್ರ | ಹಿರಿಯ ಆರೋಗ್ಯ ಪರಿವೀಕ್ಷಕರು |
| 10 | ಶ್ರೀ.ಮಹಮ್ಮದ್ ಮುದಾಸೀರ್ | ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 11 | ಶ್ರೀಮತಿ.ಬೇಬಿ ಜಿ.ಆರ್ | ವಾರ್ಡ್ ಮಾರ್ಷಲ್ |
| | ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು | |
| 12 | ಶ್ರೀ.ಸುರೇಶ್ .ವಿ | ಎ-ನಾರಾಯಣಪುರ |
| 13 | ಶ್ರೀಮತಿ.ಮಂಗಳ | ಎ-ನಾರಾಯಣಪುರ |
| 14 | ಶ್ರೀ.ಸುನಿಲ್ | ಎ-ನಾರಾಯಣಪುರ |

Scanned with CamScanner

| | | |
|---|---|---|
| 15 | ಶ್ರೀ.ಚಂದ್ರ ಮೋಹನ್ | ಎ–ನಾರಾಯಣಪುರ |
| 16 | ಶ್ರೀಮತಿ ಸುಲೇಖ | ಎ–ನಾರಾಯಣಪುರ |
| 17 | ಶ್ರೀ.ರಾಮು.ವಿ | ಎ–ನಾರಾಯಣಪುರ |
| 18 | ಶ್ರೀ.ಚಿಟ್ಟಿ | ಎ–ನಾರಾಯಣಪುರ |
| 19 | ಶ್ರೀ.ಮುರಳಿಧರ್ | ಎ–ನಾರಾಯಣಪುರ |
| 20 | ಶ್ರೀ.ಕಾಂತ ರಾಜು | ಎ–ನಾರಾಯಣಪುರ |
| 21 | ಶ್ರೀ.ಉದಯ್ ಕುಮಾರ್ | ಎ–ನಾರಾಯಣಪುರ |
| 22 | ಶ್ರೀ.ಆಯುಬ್ | ಎ–ನಾರಾಯಣಪುರ |

**1.ಕೋವಿಡ್–19ರ ಸಾಂಕ್ರಮಿಕ ರೋಗಕ್ಕೆ ಸಂಬಂಧಿಸಿದಂತೆ, ಸಾಂಬಾವ್ಯ ಮೂರನೇ ಅಲೆಯನ್ನು ನಿಯಂತ್ರಿಸುವ ಬಗ್ಗೆ ಮತ್ತು ಸೊಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗೃತ ಕ್ರಮಗಳ ಬಗ್ಗೆ.**

ಈ ಕುರಿತು ಚರ್ಚಿಸಲಾಗಿ, ವಾರ್ಡ್‌ಗೆ ಸಂಬಂಧಿಸಿದ ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಆರೋಗ್ಯ ಅಧಿಕಾರಿಗಳು ವಾರ್ಡ್‌ನಲ್ಲಿ ಕೋವಿಡ್–19ರ ಸಾಂಕ್ರಮಿಕ ರೋಗಕ್ಕೆ ಸಂಬಂಧಪಟ್ಟಂತೆ ಸಾಂಬಾವ್ಯ ಮೂರನೇ ಅಲೆಯನ್ನು ಹರಡುವುದನ್ನು ತಡೆಗಟ್ಟುವಸಲುವಾಗಿ ಎಲ್ಲಾ ಮುಂಜಾಗೃತ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವುದಾಗಿ ತಿಳಿಸಿರುತ್ತಾರೆ, ಆರೋಗ್ಯ ಅಧಿಕಾರಿಗಳು ಕೋವಿಡ್ ಲಸಿಕೆಯನ್ನು ಎಲ್ಲಾ ಸಾರ್ವಜನಿಕರಿಗೆ ಒಂದನೇ ಮತ್ತು ಎರಡನೇ ಡೋಸ್ ಲಸಿಕೆಯನ್ನು ನೀಡುತ್ತಿರುವುದಾಗಿ ತಿಳಿಸಿದರು. ಈ ಬಗ್ಗೆ ಸೋಂಕು ಹರಡುವುದನ್ನು ತಡೆಗಟ್ಟುವ ಸಲುವಾಗಿ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವಂತೆ ತೀರ್ಮಾನಿಸಿ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಮತ್ತು ಸಂಬಂದಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.

**2. ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿಗಳ ಸಂಬಂಧಿಸಿದ ವಿಷಯಗಳ ಬಗ್ಗೆ.**

ವಾರ್ಡ್ ವ್ಯಾಪ್ತಿಯ ನೇತ್ರಾವತಿ ಬಡಾವಣೆ 3ನೇ ಅಡ್ಡರಸ್ತೆ ಮತ್ತು ವಿವೇಕಾನಂದ 4ನೇ ಅಡ್ಡರಸ್ತೆಯಲ್ಲಿ ಒಳ ಚರಂಡಿ ದುರಸ್ಥಿಗೊಂಡಿದ್ದು ಹೊಸ ಒಳಚರಂಡಿ ಅಳವಡಿಸಲು ಕೋರಿರುತ್ತಾರೆ, ಸದರಿ ಕಾಮಗಾರಿಗಳನ್ನು ಕೂಡಲೇ ಕೈಗೊಂಡು ಪೂರ್ಣಗೊಳಿಸಿ ನಿವಾಸಿಗಳ ಸಮಸ್ಯೆಗಳನ್ನು ಬಗೆಹರಿಸುವಂತೆ ಸಂಬಂಧಪಟ್ಟ ಬಿ.ಡಬ್ಲ್ಯು.ಎಸ್.ಎಸ್.ಬಿ **ಸಹಾಯಕ ಅಭಿಯಂತರರಿಗೆ** ಸೂಚಿಸಲಾಯಿತು.

**3. ವಾರ್ಡ್‌ನಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ .**

ವಾರ್ಡ್‌ನಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ ಚರ್ಚಿಸಲಾಗಿದ್ದು, ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿಯನ್ನು ಸರಿಯಾಗಿ ನಿರ್ವಹಿಸುವಂತೆ ಸಂಬಂಧಪಟ್ಟ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು.

**4. ವಿದ್ಯುತ್ ಸರಬರಾಜು(ಬೆಸ್ಕಾಂ)ಗೆ ಸಂಬಂಧಿಸಿದ ವಿಷಯದ ಬಗ್ಗೆ.**

ವಾರ್ಡ್ ವ್ಯಾಪ್ತಿಯಲ್ಲಿ ಬರುವ ನೇತ್ರಾವತಿ ಬಡಾವಣೆ ಮತ್ತು ಚಿಕ್ಕ ಸುಬ್ಬಣ್ಣ ರಸ್ತೆಯಲ್ಲಿ ಬೀದಿ ದೀಪದ ಕಂಬಗಳು ದುರಸ್ಥಿಗೊಂಡಿದ್ದು ಹೊಸ ಬೀದಿ ದೀಪದ ಕಂಬಗಳನ್ನು ಅಳವಡಿಸಲು ಸಾರ್ವಜನಿಕರು ಕೋರಿರುತ್ತಾರೆ,ಸದರಿ ಕಾಮಗಾರಿಯನ್ನು ಕೊಡಲೇ ಕೈಗೊಂಡು ನಿವಾಸಿಗಳ ಸಮಸ್ಯೆಗಳನ್ನು ಬಗೆಹರಿಸಿ ಸಮರ್ಪಕವಾಗಿ ನಿರ್ವಹಿಸುವಂತೆ ಸಂಬಂಧಪಟ್ಟ ಬೆಸ್ಕಾಂನ ಕಿರಿಯ ಅಭಿಯಂತರರಿಗೆ ಸೂಚಿಸಲಾಯಿತು.

**5.ಕಂದಾಯ ಇಲಾಖೆಗೆ ಸಂಬಂದಿಸಿದ ವಿಷಯಗಳ ಬಗ್ಗೆ.**

ಈ ಕುರಿತು ಚರ್ಚಿಸಲಾಗಿ, ವಾರ್ಡ್ ವ್ಯಾಪ್ತಿಯಲ್ಲಿ ಬರುವ ಗುರುತಿನ ಚೀಟಿಯನ್ನು ಸರಿಯಾದ ಸಮಯಕ್ಕೆ ಮಾಡಿಕೊಡುತಿಲ್ಲವೆಂದು ಸಾರ್ವಜನಿಕರು ತಿಳಿಸಿರುತ್ತಾರೆ. ಆದ್ದರಿಂದ ಈ ಕೂಡಲೇ ಸೂಕ್ತ ಕ್ರಮ ಕೈಗೊಂಡು ಸಮಯಕ್ಕೆ ಸರಿಯಾಗಿ ಗುರುತಿನ ಚೀಟಿಗಳನ್ನು ಮಾಡಿಕೊಡುವಂತೆ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಗೆ ಸೂಚಿಸಲಾಯಿತು.

Scanned with CamScanner

6. ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ .

ವಾರ್ಡ್‌ನ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲಾಗಿದ್ದು, ಉದಯನಗರ 2ನೇ ಮುಖ್ಯರಸ್ತೆಯು ಹಳಾಗಿದ್ದು ಮರು ಡಾಂಬರೀಕರಣ ಮಾಡುವಂತೆ ಸಾರ್ವಜನಿಕರು ಕೋರಿರುತ್ತಾರೆ. ಈಗಾಗಲೇ ಪುಷ್ಪಾಂಜಲಿ ಟೆಂಟ್ ರಸ್ತೆಯನ್ನು ಮೆಟ್ರೋ ಸ್ವಾಧೀನಪಡಿಸಿಕೊಂಡಿರುವುದರಿಂದ, ಈ ರಸ್ತೆಗೆ ಮಂಜೂರಾಗಿರುವ ಕಾಮಗಾರಿಯನ್ನು ಉದಯನಗರ 2ನೇ ಮುಖ್ಯರಸ್ತೆಗೆ ವರ್ಗಾಯಿಸುವಂತೆ ಹಾಗೂ ಸದರಿ ಕಾಮಗಾರಿಯನ್ನು ಕೈಗೊಳ್ಳುವಂತೆ ತೀರ್ಮಾನಿಸಿ ಸಭೆಯಲ್ಲಿ ಸಂಬಂಧಪಟ್ಟ ವಾರ್ಡ್ ಅಭಿಯಂತರರಿಗೆ ಸೂಚಿಸಲಾಯಿತು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ.56 ಎ.ನಾರಾಯಣಪುರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

P. Vemaraju 23/12/2021
ನೋಡಲ್ ಅಧಿಕಾರಿ ಹಾಗೂ
ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು
ಸಹಾಯಕ ಕಾರ್ಯಪಾಲಕ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:-

1. ಮಾನ್ಯ ಜಂಟಿ ಆಯುಕ್ತರು, ಮಹದೇವಪುರ ವಲಯ ರವರ ಮಾಹಿತಿಗಾಗಿ ರವಾನಿಸಿದೆ.
2. ಮುಖ್ಯ ಅಭಿಯಂತರರು, ಮಹದೇವಪುರ ವಲಯ ರವರ ಮಾಹಿತಿಗಾಗಿ ರವಾನಿಸಿದೆ.
3. ಕಛೇರಿ ಪ್ರತಿ.

Scanned with CamScanner